**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಇಂಡಿ.**

**OS No**.161/2016

**PW**:1

**ದಿನಾಂಕ 08.07.2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ6 ನೇ ಪ್ರತಿವಾದಿ ಪರ ಶ್ರೀ.ಎಸ್.ಎಸ್.ಬಿ. ವಕೀಲರಿಂದ:**

ಚನಬಸಪ್ಪ, ಸಿದ್ದಪ್ಪ ಮತ್ತು ಚಂದ್ರಾಮ ಇವರು ನಿಮ್ಮ ಮಾವನ ಮಕ್ಕಳು ಎಂದರೆ ಸಾಕ್ಷಿಯು ನಮ್ಮ ಅಜ್ಜಿಯ ಮಕ್ಕಳು ಎಂದು ನುಡಿಯುತ್ತಾರೆ. ಸದರಿ ಅಜ್ಜಿ ಎಂದರೆ ನನ್ನ ಅಜ್ಜನ ತಂಗಿ. ಬಾಳವ್ವ ಇವರು ನನ್ನ ತಂದೆಯ ತಾಯಿ. ನಾವು 3 ಜನ ಮಕ್ಕಳು ಅವರೆಂದರೆ ನಾನು, ಕುಮಾರ ಮತ್ತು ಚನಬಸಪ್ಪ. ಬಾಳವ್ವ ಸತ್ತ ನಂತರ ಕರಬಸಪ್ಪ ಈತನು ಶಂಕ್ರೆವ್ವ ಎಂಬುವವರನ್ನು 2 ನೇ ಮದುವೆ ಆಗಿರುತ್ತಾನೆ ಎಂದರೆ ಸರಿ. ಸದರಿ ಶಂಕ್ರೆವ್ವ ಇವರಿಗೆ ಬಾಳಪ್ಪ ಮತ್ತು ಗುರುಬಾಯಿ ಎಂಬ ಇಬ್ಬರು ಮಕ್ಕಳು ಎಂದರೆ ಸರಿ. ಶಂಕ್ರೆವ್ವ ಇವರು ಜೀವಂತವಾಗಿರುತ್ತಾರೆ ಎಂದರೆ ಸರಿ. ಶಂಕ್ರೆವ್ವ, ಬಾಳವ್ವ ಮತ್ತು ಗುರುಬಾಯಿ ಇವರನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ದಾವಾ ಆಸ್ತಿ ಸರ್ವೆ ನಂ.562 ಇರುತ್ತದೆ. 1 ನೇ ಪ್ರತಿವಾದಿ ನನ್ನ ತಂದೆ. ಸರ್ವೆ ನಂ.97 ಇದು ನನ್ನ ತಂದೆಯ ಆಸ್ತಿ. ಸದರಿ ಆಸ್ತಿ ಸರ್ವೆ ನಂ.97 ಇದನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ನಾನು ಸರ್ವೆ ನಂ.562 ರ ಮೇಲೆ ಮಾತ್ರ ದಾವೆ ಮಾಡಿರುತ್ತೇನೆ. ನಾನು 5 ಎಕರೆ 25 ಗುಂಟೆ ಮೇಲೆ ಈ ದಾವೆಯನ್ನು ಮಾಡಿದ್ದು ಅದು ಈರಪ್ಪ ಇವರ ಹೆಸರಿನಲ್ಲಿ ಇರುತ್ತದೆ. ಈರಪ್ಪ ಇವರು 3 ಜನ ಅಣ್ಣ ತಮ್ಮಂದಿರು. ಸದರಿ ಈರಪ್ಪ ಇವರ ತಾಯಿ ಮತ್ತು ಈರಪ್ಪ ಅವರ ಸಹೋದರರು ಶಿರಶ್ಯಾಡದಲ್ಲಿ ಇರುತ್ತಾರೆ ಮತ್ತು ಮೊದಲು ನಮ್ಮ ಜೊತೆ ಇದ್ದರು ಎಂದರೆ ಸರಿ. 6 ರಿಂದ 11 ನೇ ಪ್ರತಿವಾದಿಯರು ನಮ್ಮ ಮನೆಯಲ್ಲಿ ಶಿರಶ್ಯಾಡದಲ್ಲಿ ಇದ್ದರಿಂದ ನನ್ನ ಅಜ್ಜನು ಅವರಿಗೆ ದಾವಾ ಆಸ್ತಿಯನ್ನು ವಾಟ್ನಿ ಮಾಡಿಕೊಟ್ಟಿರುತ್ತಾನೆ ಎಂದರೆ ಸರಿಯಲ್ಲ. ನನ್ನ ಅಜ್ಜನು ದಿಃ09.06.1985 ರಂದು ತನ್ನ ತಂಗಿ ಮಕ್ಕಳಾದ ಈರಪ್ಪ, ಮಲ್ಲಪ್ಪ ಮತ್ತು ಚಂದ್ರಾಮ ಇವರಿಗೆ ದಾವಾ ಆಸ್ತಿಯಲ್ಲಿ ವಾಟ್ನಿ ಮಾಡಿಕೊಟ್ಟಿರುತ್ತಾನೆ ಎಂದರೆ ಸರಿಯಲ್ಲ. ಸದರಿ ವಾಟ್ನಿ ಪ್ರಕಾರ ಡ ನಂ.3542 ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಡ ನಂ.3542 ನ್ನು ರದ್ದುಮಾಡಲು ನನ್ನ ತಂದೆಯಾಗಲಿ ಅಥವಾ ನನ್ನ ಅಜ್ಜ ಆಗಲಿ ಸೂಕ್ತವಾದ ಪ್ರಾಧಿಕಾರದ ಮುಂದೆ ಹೋಗಿರುತ್ತಾರೋ ಅಥವಾ ಇಲ್ಲವೋ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಅಥವಾ ದಾವೆಯಲ್ಲಿ ಡ

ನಂ.3542 ವಾಟ್ನಿಯಂತೆ 1985 ರಲ್ಲಿ ಮಂಜೂರಾಗಿರುತ್ತದೆ ಎಂದು ಬರೆಸಿರುವುದಿಲ್ಲ. 6 ಮತ್ತು 11 ಇವರು ವಾಟ್ನಿ ಮಾಡಿಕೊಂಡಿದ್ದು ಅದು ಡ ನಂ.4422 ಆಗಿರುತ್ತದೆ ಎಂದು ಬರೆಸಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಡ ನಂ.3542 ಮತ್ತು 4422 ನ್ನು ನಾನು ರದ್ದುಮಾಡಲು ಯಾವುದೇ ಕಂದಾಯ ಇಲಾಖೆಯ ಮುಂದೆ ಪ್ರಶ್ನೆ ಮಾಡಿರುವುದಿಲ್ಲ. ಸರ್ವೆ ನಂ.97 ಇದು ನನ್ನ ತಂದೆಯ ಹೆಸರಿನಲ್ಲಿ ಇದ್ದು ಆದರೆ ಅದು ನನ್ನ ಅಜ್ಜನಿಂದ ಬಂದ ಆಸ್ತಿ ಇರುತ್ತದೆಯೋ ಅಥವಾ ಇಲ್ಲವೋ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ನಾನು ಬುದ್ದಿಪೂರ್ವಕವಾಗಿ ಸರ್ವೆ ನಂ.97 ಇದು ಅಜ್ಜನಿಂದ ಬಂದ ಆಸ್ತಿ ಇರುತ್ತದೆಯೋ ಅಥವಾ ಇಲ್ಲವೋ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲವೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ.97 ರಲ್ಲಿ ಇನ್ನೂ ವಾಟ್ನಿ ಆಗಿರುವುದಿಲ್ಲ. ಸದರಿ 6 ರಿಂದ 11 ನೇ ಪ್ರತಿವಾದಿಯರು ವಾಟ್ನಿ ಮಾಡಿಕೊಂಡು ದಾವಾ ಆಸ್ತಿಯ ಉಪಭೋಗ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ಖೊಟ್ಟಿಯಾಗಿ ಮಾಡಿಕೊಂಡಿರುತ್ತಾರೆ ಮತ್ತು ನಾವೇ ಉಪಭೋಗ ಮಾಡುತ್ತಿದ್ದೇವೆ ಎಂದು ನುಡಿಯುತ್ತಾರೆ. 562 ರಲ್ಲಿ 3 ಪಟ್ಟಿಗಳು ಆಗಿದ್ದು ಅವು ಉಮೇಶ, ಶಂಕ್ರೆವ್ವ ಮತ್ತು ಈರಪ್ಪ ಇವರ ಹೆಸರಿನಲ್ಲಿ ಇರುತ್ತವೆ. ಸದರಿ ಉಮೇಶ ಶಂಕ್ರೆವ್ವ ಮತ್ತು ಈರಪ್ಪ ಇವರು ದಾವಾ ಆಸ್ತಿಯಲ್ಲಿ ವಾಟ್ನಿ ಮಾಡಿಕೊಂಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಸರ್ವೆ ನಂ.562/2 ಅ ಇದು 6 ನೇ ಪ್ರತಿವಾದಿ ಹೆಸರಿನಲ್ಲಿ, 562/2 ಬ ಇದು ಪ್ರತಿವಾದಿ ನಂ.7 ರಿಂದ 10 ರವರ ಹೆಸರಿನಲ್ಲಿ ಹಾಗೂ ಸರ್ವೆ ನಂ.562/2 ಕ ಇದು 11 ನೇ ಪ್ರತಿವಾದಿಯ ಹೆಸರಿನಲ್ಲಿ ಇರುವುದು ನನಗೆ ಗೊತ್ತಿದ್ದರು ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1985 ನೇ ಇಸವಿಯಿಂದ ಸದರಿ ದಾವಾ ಆಸ್ತಿಗಳಲ್ಲಿ 7 ರಿಂದ 11 ನೇ ಪ್ರತಿವಾದಿಯರು ಉಪಭೋಗ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ನಾನು ಮತ್ತು 7 ರಿಂದ 11 ನೇ ಪ್ರತಿವಾದಿಯರು ಸೇರಿಕೊಂಡು ಉಪಭೋಗ ಮಾಡುತ್ತಿದ್ದೇವೆ ಎಂದು ನುಡಿಯುತ್ತಾರೆ. 1985 ನೇ ಇಸವಿಯಲ್ಲಿ ನೀನು ಎಷ್ಟನೇ ವರ್ಷದವನು ಇದ್ದೇ ಎಂದರೆ ಸಾಕ್ಷಿಯು ನಾನೇ ಶಾಲೆ ಕಲಿತಿಲ್ಲ ಆದ್ದರಿಂದ ನನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ನನಗೆ ಈಗ 40 ವರ್ಷ ವಯಸ್ಸು. 2016 ನೇ ಇಸವಿಯಲ್ಲಿ ನನಗೆ 40 ವರ್ಷ ವಯಸ್ಸಾಗಿರುತ್ತದೆ ಎಂದು ದಾವೆಯಲ್ಲಿ ಬರೆದಿರುತ್ತದೆ ಎಂದರೆ ನಾನು ಶಾಲೆಯನ್ನು ಕಲಿತಿಲ್ಲ ಆದ್ದರಿಂದ ಗೊತ್ತಿಲ್ಲವೆಂದು ನುಡಿಯುತ್ತಾರೆ. ನಾನು ನಮ್ಮ ತಂದೆಯನ್ನು ದಾವಾ ಆಸ್ತಿಗಳನ್ನು ಯಾಕೆ ಅಜ್ಜನು ಪ್ರತಿವಾದಿ ನಂ.7 ರಿಂದ 11 ರವರ ಹೆಸರಿನಲ್ಲಿ ಮಾಡಿರುತ್ತಾರೆ ಎಂದು ಕೇಳಿರುವುದಿಲ್ಲ. ನಮ್ಮ ಅಜ್ಜನು



ತೀರಿಕೊಂಡಾಗ ನಾನು ಹುಟ್ಟಿರುವುದಿಲ್ಲ. ನನ್ನ ಅಜ್ಜನಿಗೆ ದಾವಾ ಆಸ್ತಿಗಳು ಹೇಗೆ ಬಂದಿರುತ್ತವೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಮಾಡಿರುವುದಿಲ್ಲ. ನಮ್ಮ ಅಜ್ಜನು ನಮ್ಮ ತಂದೆಯವರ ಒಪ್ಪಿಗೆಯನ್ನು ಪಡೆದುಕೊಂಡು ದಾವಾ ಆಸ್ತಿಯನ್ನು 6 ರಿಂದ 11 ನೇ

ಪ್ರತಿವಾದಿಯರ ಹೆಸರಿಗೆ ಮಾಡಿರುತ್ತಾರೆ ಆದ ಕಾರಣ ಅವರು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನಮಗೆ ಯಾವುದೇ ಹಕ್ಕು ಇಲ್ಲದೇ ಇದ್ದರು ಸಹ ಪ್ರತಿವಾದಿಯರಿಗೆ ತೊಂದರೆ ಮಾಡಲು ಸುಳ್ಳು ದಾವೆ ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ:**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ. ಸರಿ ಇದೆ.

ಸಹಿ/-

ಜೆ.ಎಂ.ಎಫ್.ಸಿ. ನ್ಯಾಯಾಲಯ

ಇಂಡಿ.